## **<u>ನಾಲ್ಕನೆಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಜಯಪುರ, ಇವರ ನ್ಯಾಯಾಲಯ</u>**

**ಎಸ್.ಸಿ.ನಂಃ 128/2025**
**ಸಿಡಬ್ಲೂಃ 16**
**ಪಿಡಬ್ಲೂಃ 11**

| | |
|---|---|
| ಸಾಕ್ಷಿದಾರರ ಹೆಸರು | **:** ಶಂಕ್ರಯ್ಯ ಮಠಪತಿ |
| ತಂದೆಯ ಹೆಸರು | **:** ಬಸಯ್ಯ |
| ವಯಸ್ಸು | **: 38** ವರ್ಷ |
| ಉದ್ಯೋಗ | **:** ಒಕ್ಕಲುತನ |
| ವಾಸಸ್ಥಳ | **:** ಮಸೂತಿ**.** |

- - - - -

**<u>ಇಂದು ದಿನಾಂಕ 05.03.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ</u>**

1) ಈಗ **10-12** ವರ್ಷಗಳ ಕೆಳಗೆ ಬಜಾಜ ಕಂಪನಿಯ ಮೋಟರ ಸೈಕಲ್ ನಂ**.**ಕೆ**.**ಎ**.-31/**ಕೆ**-9812** ನೇದನ್ನು ಒಬ್ಬ ಸಂಗಪ್ಪ ಗಳಸಂಗಿ ಅವರ ಕಡೆಯಿಂದ ಖರೀದಿ ಮಾಡಿರುತ್ತೇನೆ**.** ಅದನ್ನು ಒಂದೆರಡು ವರ್ಷ ಬಳಸಿ ಬಜಾಜ ಶೋರೂಮನಲ್ಲಿ ಎಕ್ಸಚೇಂಜ ಮೇಳದಲ್ಲಿ ಏಜೆಂಟರಿಗೆ ಮಾರಿರುತ್ತೇನೆ**.** ಅದನ್ನು ಅವರು ಯಾರಿಗೆ ಮಾರಿದ್ದಾರೆ ಎಂದು ನನಗೆ ಗೊತ್ತಿರುವುದಿಲ್ಲ**.** ಆದರೆ ಕಾಗದ ಪತ್ರಗಳನ್ನು ಆ ಕಾಲಕ್ಕೆ ಅವರಿಗೆ ಕೊಟ್ಟಿದ್ದೆ**.** ಮುಂದೇನಾಗಿರುತ್ತದೆ ಎಂದು ಗೊತ್ತಿರುವುದಿಲ್ಲ**.**

**2)** ಈಗ ಒಂದು ವರ್ಷದ ಹಿಂದೆ ನಿಡಗುಂದಿ ಪೋಲೀಸರು ನನ್ನನ್ನು ಕರೆಯಿಸಿ**,** ನಿನ್ನ ಹೆಸರಿನಲ್ಲಿರುವ ವಾಹನವು ಶ್ರೀಗಂಧದ ಕಟ್ಟಿಗೆಯ

ಸಾಗಾಣಿಕೆಯಲ್ಲಿ ಭಾಗಿಯಾಗಿದೆ, ಸದರಿ ವಾಹನವನ್ನು **2** ನೇ ಆರೋಪಿಯು ಉಪಯೋಗಿಸಿರುತ್ತಾನೆ ಅಂತಾ ಹೇಳಿದರು.

**ಪಾಟೀ ಸವಾಲುಃ ಶ್ರೀ ವಿ.ಬಿ.ಡಿ., ವಕೀಲರಿಂದ 2 ನೇ ಆರೋಪಿತನ ಪರವಾಗಿಃ**

**3)** ಸದರಿ ವಿಷಯ ಪೋಲೀಸರು ಹೇಳಿದ ಮೇಲೆ ಗೊತ್ತಾಗಿರುತ್ತದೆ ಮತ್ತು ನನಗೆ ವೈಯಕ್ತಿಕ ಮಾಹಿತಿ ಇರುವುದಿಲ್ಲ ಎಂದರೆ ನಿಜ. ಸದರಿ ವಾಹನವನ್ನು **2** ನೇ ಆರೋಪಿಯು ಉಪಯೋಗ ಮಾಡುತ್ತಿದ್ದ ಎಂದು ಪೋಲೀಸರು ಹೇಳಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 1, 3, 5 ಮತ್ತು 6 ನೇ ಆರೋಪಿತರ ಪರವಾಗಿಃ**

ಆರೋಪಿ ನಂ.**1, 3, 5** ಮತ್ತು **6** ರವರ ಪರ ವಕೀಲರು ಶ್ರೀ ವಿ.ಬಿ.ಡಿ. ವಕೀಲರು ಮಾಡಿದ ಪಾಟಿಸವಾಲನ್ನು ತಮ್ಮ ಪರವಾಗಿ ಅಳವಡಿಸಿಕೊಳ್ಳುವುದಾಗಿ ನುಡಿದಿರುತ್ತಾರೆ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)
ಓ.ಹೇ.ಕೇ. ಸರಿ ಅದೆ.

4 ನೆಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ವಿಜಯಪುರ.

# **<u>ನಾಲ್ಕನೆಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಜಯಪುರ, ಇವರ ನ್ಯಾಯಾಲಯ</u>**

**ಎಸ್.ಸಿ.ನಂಃ 128/2025**
**ಸಿಡಬ್ಲ್ಯೂಃ 17**
**ಪಿಡಬ್ಲ್ಯೂಃ 12**

ಸಾಕ್ಷಿದಾರರ ಹೆಸರು : ಮಲ್ಲಿಕಾರ್ಜುನ ನಾಗೋಡ

ತಂದೆಯ ಹೆಸರು : ದುಂಡಪ್ಪ

ವಯಸ್ಸು : **21** ವರ್ಷ

ಉದ್ಯೋಗ : ವಿದ್ಯಾರ್ಥಿ

ವಾಸಸ್ಥಳ : ಕೊಲ್ಹಾರ

- - - - -

**<u>ಇಂದು ದಿನಾಂಕ 05.03.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ</u>**

1) ಚಾ.ಸಾ.**1** ನನಗೆ ಸಂಬಂಧಿಕರಾಗಬೇಕು. ಅವರ **18** ಎಕರೆ ಜಮೀನು ಆಸಂಗಿ ರಸ್ತೆಗೆ ಹೊಂದಿಕೊಂಡು ಇರುತ್ತದೆ. ಅವರು ಜಮೀನಿನಲ್ಲಿ ಶ್ರೀಗಂಧದ ಗಿಡಗಳನ್ನು ಬೆಳೆದಿದ್ದರು. ದಿನಾಂಕ **03.11.2023** ರಂದು ಚಾ.ಸಾ.**1** ರವರು ತಾನು ಜಮೀನಿನಲ್ಲಿ ಬೆಳೆದ **100** ಶ್ರೀಗಂಧದ ಗಿಡಗಳನ್ನು ಯಾರೋ ಕಡಿದು ಕದ್ದುಕೊಂಡು ಹೋಗಿದ್ದಾರೆ ಎಂದು ಹೇಳಿರುತ್ತಾರೆ.

**2)** ವಿಷಯ ತಿಳಿದು ನಾನು ಠಾಣೆಗೆ ಹೋಗಿರುತ್ತೇನೆ. ಅಲ್ಲಿ ಚಾ.ಸಾ.**1** ರವರು ಫಿರ್ಯಾದಿ ಬರೆಯಲು ಹೇಳಿದ್ದು, ನಾನು ಫಿರ್ಯಾದಿ ಬರೆದಿರುತ್ತೇನೆ. ಈಗ ನನ್ನ ದಸ್ತೂರ ಸಹಿ ಇರುವ ದೂರನ್ನು ನೋಡುತ್ತಿದ್ದು,

ಅದನ್ನು ಈಗಾಗಲೇ ನಿ.ಪಿ.**1** ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ.**1**(ಬಿ) ಎಂದು ಗುರುತಿಸಲಾಯಿತು. ಸದರಿ ಶ್ರೀಗಂಧದ ಗಿಡಗಳನ್ನು ಯಾರು ಕಡೆದುಕೊಂಡು ಹೋಗಿರುತ್ತಾರೆಂದು ಗೊತ್ತಿರುವುದಿಲ್ಲ.

**<u>ಪಾಟೀ ಸವಾಲುಃ ಶ್ರೀ ವಿ.ಬಿ.ಡಿ., ವಕೀಲರಿಂದ 2 ನೇ ಆರೋಪಿತನ ಪರವಾಗಿಃ</u>**

**3)** ನಾನು ಪೋಲೀಸರು ಹೇಳಿದಂತೆ ಪೋಲೀಸ ಠಾಣೆಯಲ್ಲಿ ದೂರು ಬರೆದಿರುತ್ತೇನೆ. ನಾನು ಪೋಲೀಸರು ಹೇಳಿದಂತೆ ಸುಳ್ಳು ದೂರು ಬರೆದಿರುತ್ತೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ 1, 3, 5 ಮತ್ತು 6 ನೇ ಆರೋಪಿತರ ಪರವಾಗಿಃ</u>**

ಆರೋಪಿ ನಂ.**1, 3, 5** ಮತ್ತು **6** ರವರ ಪರ ವಕೀಲರು ಶ್ರೀ ವಿ.ಬಿ.ಡಿ. ವಕೀಲರು ಮಾಡಿದ ಪಾಟಿಸವಾಲನ್ನು ತಮ್ಮ ಪರವಾಗಿ ಅಳವಡಿಸಿಕೊಳ್ಳುವುದಾಗಿ ನುಡಿದಿರುತ್ತಾರೆ.

**<u>ಮರು ವಿಚಾರಣೆಃ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)
ಓ.ಹೇ.ಕೇ. ಸರಿ ಅದೆ.

4 ನೆಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ವಿಜಯಪುರ.

## <u>ನಾಲ್ಕನೆಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಜಯಪುರ, ಇವರ ನ್ಯಾಯಾಲಯ</u>

**ಎಸ್.ಸಿ.ನಂಃ 128/2025**
**ಸಿಡಬ್ಲೂಃ 19**
**ಪಿಡಬ್ಲೂಃ 13**

ಸಾಕ್ಷಿದಾರರ ಹೆಸರು : ಮಲ್ಲಪ್ಪ ಮೇಲಿನಮನಿ

ತಂದೆಯ ಹೆಸರು : ಯಲ್ಲಪ್ಪ

ವಯಸ್ಸು : **42** ವರ್ಷ

ಉದ್ಯೋಗ : ಪೋಲೀಸ ಪೇದೆ ನಂ.**1665,** ಕೂಡಗಿ ಠಾಣೆ

ವಾಸಸ್ಥಳ : ಕೂಡಗಿ.

- - - - -

**<u>ಇಂದು ದಿನಾಂಕ 05.03.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ</u>**

1) ನಾನು ಸನ್ **2019** ರಿಂದ **2024** ರವರೆಗೆ ಕೊಲ್ಹಾರ ಪೋಲೀಸ ಠಾಣೆಯಲ್ಲಿ ಪೋಲೀಸ ಪೇದೆ ಎಂದು ಕರ್ತವ್ಯ ನಿರ್ವಹಿಸಿದ್ದೇನೆ.

**2)** ದಿನಾಂಕ **03.11.2023** ರಂದು ಸಂಜೆ **07.45** ಘಂಟೆಗೆ ಈ ಪ್ರಕರಣದಲ್ಲಿ ದಾಖಲಾದ ಮೂಲ ಫಿರ್ಯಾದಿ ಮತ್ತು ಪ್ರ.ವ.ವರದಿಯನ್ನು ಮಾನ್ಯ ನ್ಯಾಯಾಧೀಶರಿಗೆ ತಲುಪಿಸಲು ದಾಖಲಾಧಿಕಾರಿಗಳು ನಿರ್ದೇಶನ ಕೊಟ್ಟಿದ್ದು, ಆ ಪ್ರಕಾರ ನಾನು ದಿನಾಂಕ **04.11.2023** ರಂದು ಮಧ್ಯಾಹ್ನ **01.40** ಘಂಟೆಗೆ ಮೂಲ ಫಿರ್ಯಾದಿ ಮತ್ತು ಪ್ರ.ವ.ವರದಿಯನ್ನು ಸಂಬಂಧಿಸಿದ ನ್ಯಾಯಾಧೀಶರಿಗೆ ತಲುಪಿಸಿ, ನನ್ನ ಹೇಳಿಕೆ ನೀಡಿದ್ದೇನೆ.

**<u>ಪಾಟೀ ಸವಾಲುಃ ಶ್ರೀ ವಿ.ಬಿ.ಡಿ., ವಕೀಲರಿಂದ 2 ನೇ ಆರೋಪಿತನ ಪರವಾಗಿಃ</u>**

3) ಕೊಲ್ಹಾರದಿಂದ ಬಸವನ ಬಾಗೇವಾಡಿಯು ಸುಮಾರು 35 ಕಿ.ಮೀ. ದೂರದಲ್ಲಿರುತ್ತದೆ. ಸದರಿ ರಸ್ತೆಯಲ್ಲಿ ವಾಹನ ಸಂಚಾರ ಯಾವಾಗಲೂ ಇರುತ್ತದೆ ಎಂದರೆ ಸರಿಯಲ್ಲ. ಆ ದಿವಸ ರಾತ್ರಿ 07.45 ಘಂಟೆಯಿಂದ ಮರುದಿನ ಮಧ್ಯಾಹ್ನ 01.40 ಘಂಟೆಯತನಕ ಪ್ರ.ವ.ವರದಿ ಪೋಲೀಸ ಠಾಣೆಯಲ್ಲಿಯೇ ಇತ್ತು.

4) ನಮ್ಮ ಪೋಲೀಸ ಠಾಣೆಯಲ್ಲಿಒಂದು ಸುಳ್ಳು ಫಿರ್ಯಾದಿ ದಾಖಲಾಗಿದ್ದು, ನಾನು ಉದ್ದೇಶಪೂರ್ವಕವಾಗಿ ತಡಮಾಡಿ ಪ್ರ.ವ.ವರದಿಯನ್ನು ಸಂಬಂಧಪಟ್ಟ ನ್ಯಾಯಾಧೀಶರಿಗೆ ತಲುಪಿಸಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ 1, 3, 5 ಮತ್ತು 6 ನೇ ಆರೋಪಿತರ ಪರವಾಗಿಃ</u>**

ಆರೋಪಿ ನಂ.**1, 3, 5** ಮತ್ತು **6** ರವರ ಪರ ವಕೀಲರು ಶ್ರೀ ವಿ.ಬಿ.ಡಿ. ವಕೀಲರು ಮಾಡಿದ ಪಾಟಿಸವಾಲನ್ನು ತಮ್ಮ ಪರವಾಗಿ ಅಳವಡಿಸಿಕೊಳ್ಳುವುದಾಗಿ ನುಡಿದಿರುತ್ತಾರೆ**.**

**<u>ಮರು ವಿಚಾರಣೆಃ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)
ಓ.ಹೇ.ಕೇ. ಸರಿ ಅದೆ.

4 ನೆಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ವಿಜಯಪುರ.